ಅಪ್ಪನಿಗೆ ಅಷ್ಟಾಗಿ ಹಿಡಿಸುತ್ತಿರಲಿಲ್ಲ. ಅವನ ಜೊತೆ ಎಷ್ಟು ಬೇಕೋ ಅಷ್ಟು ಮಾತಾಡಿ ಅವನನ್ನು ಮನೆಯಿಂದ ಸಾಗ ಹಾಕುತ್ತಿದ್ದರು.

ಇಂತವನು ಅಪ್ಪಾಮ್ಮನ ಮನವೊಲಿಸಿ ಒಂಟಿಕಲ್ಲಿನ ಚಿನ್ನದ ಉಂಗುರವನ್ನು ಒಂಭೈನೂರು ರೂಪಾಯಿ ಎಣಿಸಿ ತೆಗೆದುಕೊಂಡು ಹೋಗಿ ಅದಾಗಲೇ ಮೂರು ತಿಂಗಳು ಕಳೆದಿದೆ. ಆತ ಕೊಟ್ಟ ಮನಿಯಿಂದ ನಮ್ಮ ಆಗಿನ ತಾಪತ್ರಯ ಕಳೆದುಕೊಂಡು, ಮುಂದೆ ಸ್ವಲ್ಪ ದಿನಗಳಾದ ಮೇಲೆ ಮನಿ ಹೊಂದಿಸಿ ಒಂಟಿಕಲ್ಲನ್ನು ಬಿಡಿಸಿಕೊಂಡು ಬರಲು ಸಾಧ್ಯವಾಗದೇ ಮೇಲೆ ಮೂರು ತಿಂಗಳಾಯಿತು. ಒಟ್ಟು ಆರು ತಿಂಗಳ ಮೇಲಾಗಿದೆ ನಮ್ಮ ಮನೆಯ ಮಹಾಲಕ್ಷ್ಮಿ ನಮ್ಮನ್ನು ಬಿಟ್ಟು ಹೋಗಿ. ಅದು ಹೋದಂದಿನಿಂದ ನಾವ್ಯಾರು ನಾವಾಗಿಲ್ಲ. ಸದರಿ ಒಂಟಿಕಲ್ಲು ಗಂಡನ ಮನೆಗೆ ಹೋದಾಗ ಬರುವ ತಾಪತ್ರಯಕ್ಕಿಂತ ಹೆಚ್ಚು ತೊಂದರೆ ಅದು ಬಚ್ಚನ ಜೊತೆ ಹೋದಾಗಿನಿಂದ ಲಾಗಾಯ್ತು, ಅಪ್ಪಾಮ್ಮನಿಗೆ ಇದರ ಮರ್ಮ ತಿಳಿದು ಸ್ಯಾನೇ ದುಃಖಿಸಿ ಅದನ್ನು ವಾಪಸ್ ತವರು ಮನೆಗೆ ತರುವ ತವಕದಲ್ಲಿದ್ದರು. ಕೊಡಬೇಕಾದ ಒಂಭೈನೂರು ಕೊಟ್ಟು ಬಿಡಿಸಿ ತರಲು ಹೋದರೆ ಈ ಗಿರಾಕಿ ಕೈಗೆ ತಪ್ಪಿಸಿಕೊಂಡು ಓಡಾಡುತ್ತಲಿದ್ದ. ಕಣ್ಣಿಗೆ ಅಪ್ಪ ಅಷ್ಟು ದೂರದಿಂದ ಕಂಡರೆ ಈತ ಇಷ್ಟು ದೂರವಿರುವಾಗಲೇ ಇನ್ನಷ್ಟು ದೂರಕ್ಕೆ ಹೋಗಿ ಅಂತರ್ಧಾನವಾಗತೊಡಗಿದ.

ಈ ಜಟಿಲ ಕುಟಿಲ ವ್ಯೂಹವನ್ನರಿಯದ ಅಪ್ಪಾಮ್ಮ ಯೋಚನೆಗೆ ಬಿದ್ದರು. ಊರಲ್ಲಿ ಎಲ್ಲಿ ಕಂಡರೂ ತಲೆತಪ್ಪಿಸಿ ಕೈಗೆ ಸಿಗದಂತೆ ಇರುತ್ತಿದ್ದ ಬಚ್ಚನನ್ನು ಗಾಳ ಹಾಕಿ ಹಿಡಿದು ಅವನಿಗೆ ಕೊಡಬೇಕಾದ್ದನ್ನು ಕೊಟ್ಟು ನಮ್ಮನೆಯ ಮಹಾಲಕ್ಷ್ಮಿಯನ್ನು ವಾಪಾಸ್ ನಮ್ಮನೆಗೆ ಕರೆ ತರಲು ಹಗಲು ಸಮಯವಲ್ಲದೆ ರಾತ್ರಿಯೇ ಸರಿಯೆಂದು ಅಂಜನ ಹಾಕಿ ಅವನನ್ನು ಅವನಿರುವ ಜಾಗಕ್ಕೇ ಹೋಗಿ ಹಿಡಿಯಬೇಕೆಂದು ಅಪ್ಪಾಮ್ಮ ಅಣ್ಣ ಆ ದಿನ ರಾತ್ರಿ ಅವನ ಹಳ್ಳಿಗೆ ಹೋಗಲು ಸಂಚಿಕೆ ಹೂಡಿದ್ದರು. ಆ ಹೋಗುವ ದಾಂಗುಡಿಯಲ್ಲಿದ್ದಾಗಲೇ ಅಮ್ಮನಿಂದ ನನಗೆ ಅವತ್ತು ಕಪಾಳಮೋಕ್ಷವಾಗಿದ್ದು.

ಸರಿ ಅಕ್ಕ ನನ್ನನ್ನು ಸಮಾಧಾನಗೊಳಿಸಿಯಾದಮೇಲೆ ಅಮ್ಮ ಬಂದು ನನ್ನನ್ನು ಸಂತೈಸಿದರು. ಎಲ್ಲರೂ ಜೊತೆಯಲ್ಲಿ ಎಂದಿನಂತೆ ನೆಲದ ಮೇಲೆ ಕುಳಿತು ಸಹಭೋಜನವನ್ನು ಸವಿದು ನಮ್ಮನ್ನು ಭದ್ರವಾಗಿ ಚಿಲಕ ಹಾಕ್ಕೊಂಡು ಮಲಗಿರಲು ಹೇಳಿ, ಅಪ್ಪಾಮ್ಮ ಅಣ್ಣ ಮೂವರು ಬಚ್ಚನನ್ನು ಭೇಟಿಯಾಗಲು ಅವನ ಹಳ್ಳಿ ವರದನಹಳ್ಳಿಗೆ ಬಿಜಯಂಗೈದರು ಎಂಬಲ್ಲಿಗೆ ಒಂಟಿಕಲ್ಲು ಉಂಗುರದ ದ್ವಿತಿಯಾಧ್ಯಾಯ ಪರಿಸಮಾಪ್ತಿಗೊಂಡಿತು.

ಇತ್ತ ಒಂಟಿಕಲ್ಲು ಸಿಕ್ಕಿದ ಅದೃಷ್ಟದಿಂದಲೋ, ಅದು ನಮ್ಮ ಮೇಲೆ ಮುನಿಸಿಕೊಂಡಿದ್ದರಿಂದಲೋ, ತನ್ನ ವೈಭವವನ್ನೆಲ್ಲಾ ಅದು ಧಾರೆಯೆರೆದು ಕೊಟ್ಟಿದ್ದರಿಂದಲೋ, ಬಚ್ಚನಿಗೆ ಶುಕ್ರದೆಸೆ ಶುರುವಾಗಿ ಬಿಟ್ಟಿತ್ತು. ಆತ ಈಗ ಮಾಮೂಲಿ ಜನಸೇವಕನಾಗಿ ಉಳಿದಿರಲಿಲ್ಲ. ಯಾವುದೋ ಕಾಂಟ್ರಾಕ್ಟು ಸಿಕ್ಕು ಮೂಲೆಮೂಲೆಯಿಂದ ಮನಿ ಆತನ ಬಳಿ ಹರಿದುಬರತೊಡಗಿತು. ಜನ ನನ್ನನ್ನು ಇನ್ನೂ ಮೊದಲಿಗಿಂತ ಜಾಸ್ತಿ ಗುರುತಿಸಿ ಮಾತಾಡಿಸತೊಡಗಿದ್ದಾರೆ. ಅವರಿಗೆ ನನ್ನ ಮೇಲೆ ಈ ಮುಂಚೆಯಿದ್ದ ಅಭಿಪ್ರಾಯ ಬದಲಾಗಿದೆ. ನನ್ನನ್ನೂ ದೊಡ್ಡ ಜನಗಳ ಸಾಲಿಗೆ ನಿಲ್ಲಿಸಿ ನೋಡುತ್ತಿದ್ದಾರೆ. ಮುಂಚೆ ದೊಡ್ಡವರ, ಇಲಾಖಾ ಅಧಿಕಾರಿಗಳ ಬಾಲಂಗೋಚಿಯಾಗಿದ್ದ ನನಗೆ ಈಗ ನನ್ನ ಸುತ್ತಲೂ ಹೇಳಿದ್ದನ್ನು ಕೇಳುವ ಲಂಗೋಟಿಗಳು ಇದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ನನ್ನ ವೇಷಭೂಷಣ ಭಾಷೆ ಬದಲಾಗಿದೆ. ಇದೆಲ್ಲವೂ ಸಾಧ್ಯವಾಗಿದ್ದು ಈ ಒಂಟಿಕಲ್ಲಿನ ಉಂಗುರ ನನಗೆ ಸಿಕ್ಕಿದ ಮೇಲೆಯೇ ಎಂದು ಬಚ್ಚ ತಿಳಿದಿದ್ದಾನೆ. ಆದಕಾರಣ ಉಂಗುರದ ಮೂಲಕ ಒಲಿದು ಬಂದಿರುವ ಈ ಭೋಗವನ್ನು ಕಳೆದುಕೊಳ್ಳಲು ಇಷ್ಟವಿರದೇ, ಅತ್ತ ಕೊಡಬೇಕಾದ ಬಾಕಿ ಬಾಬತ್ತು ಕೊಟ್ಟು ಬಿಡಿಸಿಕೊಳ್ಳಲು ಬಂದಾಗ ಅದನ್ನು ಕೊಡಲೂ ಮನಸ್ಸಿಲ್ಲದೇ ಒಳಗೊಳಗೇ ಉಗುಳು ನುಂಗುತ್ತಿದ್ದ ಬಚ್ಚ.

ಇಂತಿಪ್ಪ ಬಚ್ಚನನ್ನು ಕಂಡು ಕೊಡಬೇಕಾದ ಬಾಬತ್ತನ್ನು ಕೊಟ್ಟು ಉಂಗುರ ಬಿಡಿಸಿ ತರಲು ಹೋದ ಅಪ್ಪಾಮ್ಮ ಅಣ್ಣನಿಗೆ, 'ಈಗ ಉಂಗುರ ಕೊಡಲು ಆಗುವುದಿಲ್ಲ. ಅದೆಲ್ಲೋ ಇಟ್ಟು ಕಳೆದಿದ್ದೀನಿ. ಅದನ್ನು ಕಳೆದ ತಪ್ಪಿಗೆ ಬೇಕಾದರೆ ಅದರಷ್ಟೇ ಬೆಲೆಬಾಳುವ ಇನ್ನೊಂದು ಎರಡು ಕಲ್ಲಿನ ಉಂಗುರ ಕೊಡಿಸುವೆ' ಎಂದು ಹೇಳಿಬಿಡುವುದೇ!

ಈ ಅನುಚಿತ ವರ್ತನೆಯಿಂದ ಬೇಸರಗೊಂಡ ಅಪ್ಪ ಪರಿಪರಿಯಾಗಿ ಉಂಗುರವನ್ನು ಹಿಂದಿರಿಗಿಸುವಂತೆ ಕೇಳಿಕೊಂಡರು. 'ನೀನು ನನ್ನನ್ನು ಅಕ್ಕಾ ಅಂತ ಬಾಯ್ತುಂಬ ಕರೀತಿದ್ದೆ, ನಾನು ನಿಮ್ಮನ್ನು ಅಣ್ಣಾ ಎಂದೇ ತಿಳಿದು ಕೇಳುತ್ತಿರುವೆ ಆ ಉಂಗುರ ಕೊಟ್ಟುಬಿಡು ಬಚ್ಚಪ್ಪಣ್ಣ' ಅಂತ ಅಮ್ಮ ಅವಲತ್ತುಕೊಂಡು ಕಣ್ಣೀರು ಸುರಿಸಿದರು. ಅಣ್ಣಾ ಗೋಳೋ ಅಂತ ಅತ್ತುಕರೆದು ಕಾಲಿಗೆ ಬೀಳುವುದು ಬಾಕಿ. ಯಾವುದಕ್ಕೂ ಬಚ್ಚ ಜಗ್ಗಲಿಲ್ಲ. ಆತನದು ಒಂದೇ ಮಾತು. 'ಬೇರೇ ಉಂಗುರ ಕೊಡಿಸುತ್ತೀನಿ. ಅದನ್ನು ಮಾತ್ರ ಕೇಳಬೇಡಿ ನನ್ನಲ್ಲಿಲ್ಲ'.

ಅಪ್ಪನಿಗೆ ಈ ಮೊದಲು ಬಚ್ಚ ಮಾತಾಡಿದ ಪರಿ ನೋಡಿ ಕೋಪ ತಾರಕಕ್ಕೇರಿದ್ದು, ಆತನ ಪುಟಗೋಸಿಗಳು ಆತನ ಹಿಂದೆ ಬಂದು ನಿಂತುದನ್ನು ಕಂಡಾಗ ಅಪ್ಪನ ಕೋಪ ದಿಕ್ಕು ಬದಲಿಸಿ ಪಾತಾಳಕ್ಕಿಳಿಯಿತು. ಯಾರನ್ನು ಕರೆಸಿ ನ್ಯಾಯ ಪಂಚಾಯ್ತಿ ಮಾಡುವುದು? ನನ್ನ ಮಾತನ್ನು ಯಾರು ನಂಬುತ್ತಾರೆ? ನಾನಿಲ್ಲಿಗೆ ಹೊಸಬ. ಯಾರೂ ನಮ್ಮ ಪರ ನಿಲ್ಲುವುದಿಲ್ಲ. ಸಾಲದ್ದಕ್ಕೆ ಬಚ್ಚ ಈಗ ಮೊದಲಿನಂತಿಲ್ಲ. ಇದೆಲ್ಲವನ್ನು ಮೀರಿ ಬಚ್ಚನೇ ನಮ್ಮ ಉಂಗುರವನ್ನು ಅಡಮಾನಕ್ಕಿಕ್ಕಿಸಿಕೊಂಡು ತಂದದ್ದನ್ನು ನೋಡಿದವರ್ಯಾರಿಲ್ಲ. ಇನ್ನು ನಮಗೆ ನ್ಯಾಯ ಮರೀಚಿಕೆಯೇ ಎಂದೆಣಿದರು. ಈ ಒಂಟಿಕಲ್ಲಿನುಂಗುರದಿಂದಾಗಿಯೇ ಬಚ್ಚನ ಹಣೆಬರಹ ಬದಲಾಗಿದೆಯೆಂದು ಅಮ್ಮನೂ ಸೇರಿದಂತೆ ತಿಳಿಯಲಾರದಷ್ಟು ದಡ್ಡನೇನಾಗಿರಲಿಲ್ಲ ಅಪ್ಪ. ಬಂದ ದಾರಿಗೆ ಸುಂಕವಿಲ್ಲವೆಂದುಕೊಂಡು ರಾತ್ರಿ ಊರಿಗೆ ಮರಳುವ ಬಸ್ಸಿನ ವ್ಯವಸ್ಥೆಯಿರಲಿಲ್ಲವಾದ್ದರಿಂದ ಹಳ್ಳಿಯ ಆಲದ ಮರದೆದುರಿರುವ ಚೌಡಮ್ಮನ ಗುಡಿಯಲ್ಲಿ ಮಲಗಿ ಬೆಳಗಾಗಲು ಎಲ್ಲರೂ ಊರಿನ ದಾರಿ ಹಿಡಿದರು.

ಅಮ್ಮ ಅಲ್ಲಿ ಮಲಗಿದ್ದಾಗ ಬಹು ವಿಧವಿಧವಾಗಿ ಅಳುತ್ತಿದ್ದಳಂತೆ. ಅಪ್ಪನಾಗಲಿ ಅಣ್ಣನಾಗಲಿ ಎಷ್ಟು ಸಮಾಧಾನ ಮಾಡಿದರೂ ಅಮ್ಮನ ಅಳು ನಿಲ್ಲಲಿಲ್ಲವಂತೆ. ಅಮ್ಮ ಅಳುವುದನ್ನು ನೋಡಿ ನೋಡಿ ಬೇಜಾರಾದ ಆ ಆದಿಶಕ್ತಿ ಚೌಡಮ್ಮನ ರಾತ್ರಿ ಸಂಚಾರಕ್ಕದು ಅಡ್ಡಿಪಡಿಸಿದ್ದರಿಂದ ಆಕೆ ತನ್ನ ಲೋಕಸಂಚಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಅಮ್ಮನ ಕನಸ್ಸಿನಲ್ಲಿ ಬಂದು, ಮಗಳೇ ಯಾಕಮ್ಮಾ ಅಳುತ್ತಿರುವೆ ಎನ್ನಲು ಅಮ್ಮನು ತನಗಾದ ಅನ್ಯಾಯ ಹೇಳಿಕೊಂಡಿದ್ದಾಳೆ. ಇದನ್ನು ಕೇಳಿ ಮುಮ್ಮಲ ಮರುಗಿದ ಆದಿಶಕ್ತಿಯು, ಮಗಳೇ ಆ ಒಂಟಿಕಲ್ಲಿನ ಉಂಗುರವೊಂದನ್ನು ಬಿಟ್ಟು ಮತ್ತೇನಾದರೂ ಕೇಳು ಕರುಣಿಸುವೆ. ಅದನ್ನು ತಂದುಕೊಡುವ ಶಕುತಿಯು ನನ್ನಲ್ಲಿಲ್ಲ. ಆ ಬಚ್ಚನು ಈಗ ಮೇಲು ನೋಟಕ್ಕೆ ಕಂತ್ರಾಟುದಾರನಂತೆ ಕಂಡರೂ ಜನಕ್ಕೆ ತಿಳಿಯದಂತೆ ನಾನಾ ಧಂಧೆಗೆ ಇಳಿದಿದ್ದಾನೆ. ನಾನೂ ಕೂಡ ಅದನ್ನು ತಡೆಯಲು ಬಹುವಿಧದಲ್ಲಿ ಪ್ರಯತ್ನಪಟ್ಟೆ. ಆದರದು ಸಾಧ್ಯವಾಗಲೇ ಇಲ್ಲ. ಈಗವನು ನನ್ನನ್ನೂ ಮೀರಿ ಬೆಳೆದು ಬಿಟ್ಟಿದ್ದಾನೆ. ಆದಕಾರಣ ಅನ್ಯಥಾ ಭಾವಿಸದೇ ಬೇರೆ ವರವನ್ನು ಕೇಳು ಎಂದಳು. ಆಗ ಅಮ್ಮ ಆ ಆದಿಶಕುತಿಯ ಅಸಹಾಯಕತೆಯನ್ನು ಅರ್ಥಮಾಡಿಕೊಂಡು ವರವೊಂದನ್ನು ಕೇಳಿಯೇಬಿಟ್ಟಳು.

ಆ ವರ ಏನೆಂದಾಗಲೀ, ಯಾವ ಬಗೆಯೆಂದಾಗಲೀ, ಯಾರಿಗೋಸ್ಕರ ಎಂದಾಗಲೀ ಪರಿಪರಿಯಾಗಿ ವಿನಂತಿಸಿ ಕೇಳಿದರೂ ಅದೇನೆಂದು ಅಮ್ಮ ಈ ತನಕ ಅದನ್ನು ಯಾರ ಬಳಿಯೂ ಹೇಳಿಲ್ಲ. ಕಾಡಿಸಿ ಪೀಡಿಸಿ ಅಪ್ಪನೂ ಅದನ್ನು ಕೇಳುವುದನ್ನು ಬಿಟ್ಟಿದ್ದಾರೆ. ನನಗನ್ನಿಸುವಂತೆ ಆದಿಶಕುತಿ ಮತ್ತು ಅಮ್ಮನ ಮಧ್ಯೆ ಯಾವುದೋ ರಹಸ್ಯ ಮಾತುಕತೆ ನಡೆದಿರಬೇಕು. ಅದನ್ನು ಎಲ್ಲಿಯೂ ಯಾರ ಬಳಿಯೂ ಎಂತಹ ಸಂಧರ್ಭ ಬಂದರೂ ಹೇಳಕೂಡದೆಂದು ಆದಿಶಕುತಿ ಮಾತು ತೆಗೆದುಕೊಂಡಿರಬೇಕು.

ಒಟ್ಟಿನಲ್ಲಿ ಅದ್ಯಾವುದಾದರೂ ವರವಿರಲಿ, ಮನೆಯಲ್ಲಿ ಈಗೀಗ ಮೊದಲಿನ ತೊಂದರೆ ತಾಪತ್ರಯಗಳಿಲ್ಲ. ದಿನಗಳೆಯುತ್ತಾ ಅವು ಕಡಿಮೆಯಾಗತೊಡಗಿವೆ. ಅಣ್ಣನ ಓದು ಮುಗಿದು ಕೆಲಸ ಸಿಕ್ಕಿ ನಮಗೆ ಸಾಕಾಗಿ ಮಿಕ್ಕುವಷ್ಟು ಸಂಬಳ ತರುತ್ತಿದ್ದಾರೆ. ಒಂಟಿಕಲ್ಲಿನ ಚಿನ್ನದುಂಗುರವು ಮತ್ತದರ ನೆನಪೂ ನಮಗೀಗ ಆಗುತ್ತಿಲ್ಲ. ಅದರ ಬದಲು ಮತ್ತೊಂದು ನಾಲ್ಕು ಕಲ್ಲಿನ ಹರಳಿನುಂಗುರ ತರುತ್ತೇನೆ ಅಂತ ಅಣ್ಣ ಹೇಳುತ್ತಿದ್ದಾನೆ. ಇದನ್ನು ಕೇಳಿದ ಅಪ್ಪ ಬೀಗುತ್ತಿದ್ದರೆ ಅಮ್ಮ ಮಾತ್ರ ಚಿಂತೆಗೊಳಗಾಗುತ್ತಿರುತ್ತಾಳೆ.

■